downloaded from: www.kpscvaani.com

ಸಂಖ್ಯೆ: 10/ಸಿಬ್ಬಂದಿ/ಕೆಎಸ್ಐಎಸ್ಎಫ್(ಐಎಸ್‌ಡಿ)/2019

ಅಧ್ಯಕ್ಷರು, ಕೆಎಸ್ಐಎಸ್ಎಫ್ ಪಿಸಿ ನೇಮಕಾತಿ ಸಮಿತಿ
ಹಾಗೂ ಡಿಐಜಿಪಿ ಮತ್ತು ಕಮಾಂಡರ್ ನಕ್ಸಲ್ ನಿಗ್ರಹ ದಳ
ನಂ.60, ರಿಚ್‌ಮಂಡ್ ರಸ್ತೆ, ಬೆಂಗಳೂರು-25.
ದಿನಾಂಕ:07-12-2019

ನೋಟಿಸ್

ವಿಷಯ: 2018-19ನೇ ಸಾಲಿನ 441 ಪೊಲೀಸ್ ಕಾನ್ಸ್‌ಟೇಬಲ್ (ಕೆಎಸ್ಐಎಸ್ಎಫ್) ಅಭ್ಯರ್ಥಿಗಳಲ್ಲಿ ವೈದ್ಯಕೀಯ ಪರೀಕ್ಷೆಗೆ ಗೈರುಹಾಜರಾದ 256 ಅಭ್ಯರ್ಥಿಗಳಿಗೆ ಮತ್ತೊಮ್ಮೆ ವೈದ್ಯಕೀಯ ಪರೀಕ್ಷೆಗೆ ಹಾಜರಾಗುವಂತೆ ಅಂತಿಮ ನೋಟಿಸ್ ನೀಡುತ್ತಿರುವ ಬಗ್ಗೆ.

ಉಲ್ಲೇಖ: 1. ಅಧಿಸೂಚನೆ ಸಂಖ್ಯೆ: 03/ನೇಮಕಾತಿ-4/2018-19, ದಿನಾಂಕ: 30-07-2019.
2. ಈ ಕಛೇರಿ ಪ್ರಥಮ ತಾತ್ಕಾಲಿಕ ಆಯ್ಕೆ ಪಟ್ಟಿ ಸಮ ಸಂಖ್ಯೆ, ದಿನಾಂಕ:18-09-2019.
3. ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಾವಳಿ-1977.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19ನೇ ಸಾಲಿನ ಪೊಲೀಸ್ ಕಾನ್ಸ್‌ಟೇಬಲ್ (ಕೆಎಸ್ಐಎಸ್ಎಫ್) ಉಲ್ಲೇಖ-2ರ ತಾತ್ಕಾಲಿಕ ಆಯ್ಕೆ ಪಟ್ಟಿಯಂತೆ 441 ಅಭ್ಯರ್ಥಿಗಳಿಗೆ ದಿನಾಂಕ:21-10-2019 ರಿಂದ 08-11-2019 ರವರೆಗೆ ನಗರದ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ , ವಿಕ್ಟೋರಿಯಾ ಆಸ್ಪತ್ರೆ ಮತ್ತು ಸಾರ್ವಜನಿಕ ಆಸ್ಪತ್ರೆ, ಜಯನಗರ ಇಲ್ಲಿ ವೈದ್ಯಕೀಯ ಪರೀಕ್ಷೆಗೆ ಹಾಜರಾಗಲು ಸೂಚಿಸಲಾಗಿತ್ತು. ಸದರಿ ವೈದ್ಯಕೀಯ ಪರೀಕ್ಷೆಗೆ 185 ಅಭ್ಯರ್ಥಿಗಳು ಮಾತ್ರ ಹಾಜರಾಗಿದ್ದು, ಉಳಿದ 256 ಅಭ್ಯರ್ಥಿಗಳು ವೈದ್ಯಕೀಯ ಪರೀಕ್ಷೆಗೆ ಗೈರುಹಾಜರಾಗಿರುತ್ತಾರೆ.

ಆದ್ದರಿಂದ, ಉಲ್ಲೇಖ-03 ರ ನಿಯಮಾನುಸಾರ ಗೈರು ಹಾಜರಾದ ಅಭ್ಯರ್ಥಿಗಳಿಗೆ ಮತ್ತೊಮ್ಮೆ ವೈದ್ಯಕೀಯ ಪರೀಕ್ಷೆಗೆ ಅಂತಿಮ ಅವಕಾಶ ನೀಡಬೇಕಾಗಿರುವುದರಿಂದ ದಿನಾಂಕ:16-12-2019 ರಿಂದ 20-12-2019 ರವರೆಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಿಗದಿಪಡಿಸಲಾಗಿದೆ. ಈ ಸಂಬಂಧ ಕರೆ ಪತ್ರಗಳನ್ನು ಆನ್-ಲೈನ್ ಮುಖಾಂತರ, ನೊಂದಣಿ ಅಂಚೆ ಮುಖಾಂತರ ಹಾಗೂ ಅಭ್ಯರ್ಥಿಗಳ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್‌ನ್ನು ಕಳುಹಿಸಲಾಗಿರುತ್ತದೆ. ಗೈರುಹಾಜರಾದ ಅಭ್ಯರ್ಥಿಗಳು ವೈದ್ಯಕೀಯ ಪರೀಕ್ಷೆಗೆ ನಿಗಧಿತ ದಿನಾಂಕಗಳಂದು ಹಾಜರಾಗಲು ಸೂಚಿಸಲಾಗಿದೆ. ತಪ್ಪಿದಲ್ಲಿ (ವೈದ್ಯಕೀಯ ಪರೀಕ್ಷೆಗೆ ಗೈರು ಹಾಜರಾದಲ್ಲಿ) ಅಂತಹ ಅಭ್ಯರ್ಥಿಗಳನ್ನು ಆಯ್ಕೆ ಪಟ್ಟಿಯಿಂದ ಯಾವ ಸೂಚನೆಯನ್ನು ನೀಡದೇ ಕೈಬಿಡಲಾಗುವುದು ಹಾಗೂ ಪರಿಷ್ಕೃತ ಪಟ್ಟಿಯನ್ನು ಹೊರಡಿಸಲಾಗುವುದು. **ಗೈರುರಾಜರಾಗಿರುವ ಅಭ್ಯರ್ಥಿಗಳು ಈ ನೋಟಿಸ್‌ನ್ನು ಅಂತಿಮ ನೋಟಿಸ್ ಎಂದು ಪರಿಗಣಿಸುವುದು.**

7.12.19

(ವಿಕಾಸ್ ಕುಮಾರ್ ವಿಕಾಸ್, ಐಪಿಎಸ್)
ಅಧ್ಯಕ್ಷರು,
ಕೆಎಸ್ಐಎಸ್ಎಫ್ ಪಿಸಿ ನೇಮಕಾತಿ ಸಮಿತಿ ಹಾಗೂ
ಡಿಐಜಿಪಿ, ಮತ್ತು ಕಮಾಂಡರ್ ನಕ್ಸಲ್ ನಿಗ್ರಹ ದಳ
ಬೆಂಗಳೂರು.